

ಅರುಣ ಪಿ. ಭಟ್ಟ

## ವಾರಭವಿಷ್ಯ 16.4.2020 ರಿಂದ 22.4.2020ರ ವರೆಗೆ




ಕುಟುಂಬದ ಬಗ್ಗೆ ಹೆಮ್ಮೆ ಪಡುವಂತಹ ಬೆಳವಣಿಗೆ ಆಗುತ್ತದೆ. ವಾರದ ಶುರುವಿನಿಂದಲೇ ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ವೈಯಕ್ತಿಕ ಶ್ರಮದಿಂದ ಯಶಸ್ಸು ಸಾಧ್ಯವಾಗುತ್ತದೆ. ಹಲವು ಕಾರ್ಯಗಳನ್ನು ಪೂರೈಸಲಾಗುತ್ತದೆ.

ಶುಭದಿನ 18. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಶುಭ ಕಾರ್ಯ ಯೋಜಿಸುವ ಸಾಧ್ಯತೆ. ಈ ಅವಧಿಯಲ್ಲಿ ಮುಖ್ಯವಾದ ಕೆಲಸಗಳನ್ನು ಮಾಡಿಬಿಡಿ. ಉದ್ಯೋಗ ಸ್ಥಳದಲ್ಲಿ ನಿಮ್ಮ ಗೌರವ ಹೆಚ್ಚುವ ಸಾಧ್ಯತೆ ಇದೆ. ಹಿರಿಯ ಅಧಿಕಾರಿಗಳು, ಸಹೋದ್ಯೋಗಿಗಳ ಜತೆಗೆ ನಿಮ್ಮ ಬಾಂಧವ್ಯ ಗಟ್ಟಿ ಆಗಲಿದೆ

ಶುಭದಿನ 19. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರೋಗ್ಯ ಸುಧಾರಿಸುವುದು. ಆಸ್ತಿ ಖರೀದಿ ಚಿಂತನೆ, ಸಾಹಿತಿಗಳಿಗೆ ಉತ್ತಮ. ರಾಜಕೀಯದ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ವೃತ್ತಿ ವ್ಯವಹಾರದಲ್ಲಿ ಲಾಭ ವ್ಯವಹಾರಿಕವಾಗಿ ಅನುಕೂಲ.

ಶುಭದಿನ 21. ಚಂಡಿ ಪಾರಾಯಣ ಮಾಡಿರಿ.




ನವೋಲ್ಲಾಸ ಬರುವುದು. ದಾನಕ್ಕಾಗಿ ಖರ್ಚು. ಮಿತ್ರರಿಗೆ ಸಹಾಯ. ವ್ಯಾಪಾರದಲ್ಲಿ ಅಧಿಕ ಲಾಭ. ಹಲವು ದಿನಗಳ ಸಮಸ್ಯೆ ಬಗೆಹರೆಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮ. ಮಹತ್ವದ ಕಾಗದ ಪತ್ರಗಳ ರಕ್ಷಣೆ.

ಶುಭದಿನ 20. ಶಿವ ಕವಚ ಓದಿರಿ.




ಕುಟುಂಬ ಸದಸ್ಯರ ಜತೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ. ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಭೂ ವ್ಯಾಜ್ಯವೊಂದಕ್ಕೆ ಶ್ರಮ ಹಾಕಲಿದ್ದೀರಿ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳುವ ಅಗತ್ಯವಿದೆ.

ಶುಭದಿನ 22. ಸೌಂದರ್ಯಲಹರಿ ಪಠಿಸಿರಿ.




ಎಂಜಿನಿಯರ್ ಕ್ಷೇತ್ರದವರಿಗೆ ಹೆಚ್ಚಿನ ಅವಕಾಶ. ಸಂಗಾತಿ ಜತೆಗೆ ಇದನ್ನು ಹಂಚಿಕೊಳ್ಳುತ್ತೀರಿ. ಒಟ್ಟಾರೆಯಾಗಿ ಕುಟುಂಬದೊಳಗೆ ಸಂತಸದ ವಾತಾವರಣ. ನಿಮ್ಮ ಆದಾಯದಿಂದ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ಅಧಿಕ ಲಾಭ ಪಡೆಯುವ ಅವಕಾಶ ಇದೆ

ಶುಭದಿನ 23. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವೃತ್ತಿಪರ ಬದುಕಿನಲ್ಲಿ ಲಾಭ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಹಾಗೂ ಬಡ್ತಿಗೆ ಅವಕಾಶಗಳಿವೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಆರೋಗ್ಯವು ಚೆನ್ನಾಗಿರುತ್ತದೆ.

ಶುಭದಿನ 21. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.




ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ಕಾಡುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವ್ಯವಹಾರಗಳ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಆರೋಗ್ಯ ಉತ್ತಮವಾಗಿರುತ್ತದೆ.

ಶುಭದಿನ 22. ಶ್ರೀ ದುರ್ಗಾಪಾರಾಯಣ ಮಾಡಿರಿ.




ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಾಗಿಲ್ಲ. ಭುಜದ ನೋವು, ತಲೆ ನೋವು ಹಾಗೂ ಕಣ್ಣಿನ ಬೇನೆ ನಿಮ್ಮನ್ನು ಕಾಡಲಿದೆ. ಇದರಿಂದ ಚಿಂತೆಗೆ ಒಳಗಾಗುತ್ತೀರಿ. ಇನ್ನು ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ.

ಶುಭದಿನ 17. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಈ ವಾರ ಆರೋಗ್ಯದಲ್ಲಿ ಯಾವುದೇ ಮುಖ್ಯ ಸಮಸ್ಯೆ ಕಾಡುವುದಿಲ್ಲ. ಇದರಿಂದ ಎಷ್ಟೇ ಚಟುವಟಿಕೆ ಒತ್ತಡದ ಕೆಲಸ ಇದ್ದರೂ ಆರಾಮವಾಗಿ ಪೂರೈಸಲು ನಿಮ್ಮಿಂದ ಸಾಧ್ಯವಾಗಲಿದೆ. ಜೀವನ ಸಂತೋಷದಾಯಕವಾಗಿ ಇರುತ್ತದೆ.

ಶುಭದಿನ 16. ಕಾಲಭೈರವನ ಸೇವೆ ಮಾಡಿರಿ.




ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ಸಂಗಾತಿಯ ಭಾವನೆಗಳಿಗೆ ಗೌರವ ನೀಡುತ್ತೀರಿ. ಯಾವುದೇ ವಿಚಾರದಲ್ಲಿ ನನಗೆ ತಿಳಿದಿದ್ದೇ ಸತ್ಯ ಎಂಬ ಹಟ ಒಳ್ಳೆಯದಲ್ಲ.

ಶುಭದಿನ 18. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉನ್ನತ ಶಿಕ್ಷಣಕ್ಕೆ ಯತ್ನಿಸುತ್ತಿರುವವರಿಗೆ ಯಶಸ್ಸು. ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಬಹಳ ಒತ್ತಡ ಹಾಕಿ ನಿಮ್ಮಿಂದ ಕೆಲಸ ತೆಗೆಸುವ ಯತ್ನಗಳಾಗುತ್ತವೆ. ಈ ಅವಧಿಯಲ್ಲಿ ಕೆಮ್ಮು, ನೆಗಡಿ ಕಾಡಬಹುದು.

ಶುಭದಿನ 18. ಕನಕಧಾರಾ ಸ್ತೋತ್ರ ಪಠಣಮಾಡಿರಿ.

